## ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

### ಓಎಸ್  131/2018

**ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿನಾಂಕ 02.02.2024 ರಂದು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಪಿ. ಡಿ. ವಾದಿ ಪರ ವಕೀಲರಿಂದಃ**

1ನೇ ವಾದಿ ನನ್ನ ತಾಯಿ. ಅವರನ್ನು 2ನೇ ಪ್ರತಿವಾದಿ ಸುಮಾರು 2 ವರ್ಷದ ಹಿಂದೆ ಅವರನ್ನು ಕರೆದುಕೊಂಡು ಹೋದರು, ಅಲ್ಲಿಯವರೆಗೂ ನನ್ನ ತಾಯಿ ನನ್ನ ಜೊತೆ ಇದ್ದರು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನನ್ನ ತಾಯಿಯ ಪರವಾಗಿಯೂ ನಾನು ಸಲ್ಲಿಸಿದ್ದೇನೆ.  ನನ್ನ ತಾಯಿ ಪರವಾಗಿ ನಾನು ಸಾಕ್ಷ್ಯ ನುಡಿಯಲು ನನ್ನ ತಾಯಿ ನನಗೆ ಅನುಮತಿ ಪತ್ರ ಅಥವಾ ಅಧಿಕಾರ ಪತ್ರವನ್ನು ಬರೆದುಕೊಟ್ಟಿಲ್ಲ.  ನನ್ನ ತಂದೆ ಹೆಸರು ಸಣ್ಣಮಲ್ಲೇಗೌಡ ಅವರ ತಂದೆ ಹೆಸರು ಕರ್ಮಿಮಲ್ಲ ಬಿನ್ ಕಾಳ.  ನನ್ನ ತಾತನಿಗೆ 3  ಜನ ಮಕ್ಕಳು ಅವರು ಸಣ್ಣಮಲ್ಲೇಗೌಡ, ಜವರೇಗೌಡ ಮತ್ತು ಗೌರಮ್ಮ.

2.  ನನ್ನ ತಾತನಿಗೆ ಒಟ್ಟು 9 ಎಕರೆ ಜಮೀನು ಇರಬಹುದು. ನಮ್ಮ ತಂದೆ ಮತ್ತು ಅವರ ಸಹೋದರರು ನನ್ನ ತಾತನ ಆಸ್ತಿಯನ್ನು ವಿಭಾಗಮಾಡಿಕೊಂಡಿದ್ದಾರೆ. ನನ್ನ ತಂದೆ ಹಾಗೂ ಅವರ ಸಹೋದರರ ನಡುವೆ ವಿಭಾಗದ ಸಂಬಂದ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.  ದಾವಾ ಸ್ವತ್ತುಗಳು ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತು. ನನ್ನ ಮದುವೆಯಾಗಿ ಸುಮಾರು 28 ವರ್ಷವಾಗಿದೆ. ನನ್ನ ಮದುವೆ ಸಮಯದಲ್ಲಿ ನನ್ನ ತಂದೆ ಬದುಕಿದ್ದರು ಎಂದರೆ ಸರಿ.  ಮದುವೆ ಸಮಯದಲ್ಲಿ ಮದುವೆ ಖರ್ಚು, ವರೋಪಚಾರ ನನ್ನ ತಂದೆ ನೀಡಿದ್ದರು ಎಂದರೆ ಸರಿಯಲ್ಲ.

3. ನನ್ನ ತಾತನ ಹೆಸರಿನಲ್ಲಿರುವ  ಆಸ್ತಿಗಳು ಈಗಲೂ ಸಹ ನನ್ನ ತಾತನ ಹೆಸರಿನಲ್ಲಿ ದಾಖಲೆಗಳಿದ್ದು ಅವುಗಳು ಇನ್ನು ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮಾಯಮ್ಮ ಅರಕಲುಗೂಡು ತಾಲ್ಲೂಕು, ಬಿಳಿಗುಳಿ ಗ್ರಾಮದವರು ಎಂದರೆ ಸರಿ.  1ನೇ ಪ್ರತಿವಾದಿಯ ತವರುಮನೆಯಿಂದ 1ನೇ ಪ್ರತಿವಾದಿಗೆ ಸಾಕಷ್ಟು ಆಸ್ತಿ ಬಂದಿತ್ತು ಎಂದರೆ ಸರಿಯಲ್ಲ.  ಸದರಿ ಸ್ವತ್ತುಗಳನ್ನು 1ನೇ ಪ್ರತಿವಾದಿ ಹಾಗೂ ನನ್ನ ತಂದೆ ಜಂಟಿಯಾಗಿ

ಬೆಳಿಗುಳಿ ಗ್ರಾಮದಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಮಾರಾಟ ಮಾಡಿ ದಾವಾ ಐಟಂ 1, 2, 5 ಮತ್ತು 6 ನ್ನು ನನ್ನ ತಂದೆ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರಗಳೆಲ್ಲ 1ನೇ ವಾದಿ ನನ್ನ ತಾಯಿಗೆ ಗೊತ್ತಿದ್ದು ಅದನ್ನು ಮರೆಮಾಚಲು ನನ್ನ ತಾಯಿಯನ್ನು ನ್ಯಾಯಾಲಯಕ್ಕೆ ಕರೆಯಿಸದೆ ನಾನೇ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿಯಾಗಿರುವುದು ಸ.ನಂ.92, 94 ಮತ್ತು 96 ಹೊರತಾಗಿ ದಾವಾ ಐಟಂ 1, 2, 5 ಮತ್ತು 6 ಅಲ್ಲ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿದ್ದಲ್ಲಿ ನಾನು ನನ್ನ ಚಿಕ್ಕಪ್ಪ ಮತ್ತು ಅತ್ತೆಯ ವಿರುದ್ಧ ದಾವೆ ಹೂಡಬೇಕಾಗುತ್ತದೆ ಎಂಬ ಕಾರಣದಿಂದ ಮಾಯಮ್ಮರವರ ಪ್ರತ್ಯೇಕ ಆಸ್ತಿಯನ್ನು ಸೇರಿಸಿ ಅವರ ವಿರುದ್ಧ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಐಟಂ 3 ಮತ್ತು 4 ನನ್ನ ತಂದೆಗೆ ದರಕಾಸ್ತು ಮೂಲಕ ಬಂದಿದೆ ಎಂದರೆ ಸರಿಯಲ್ಲ. ದಾವಾ ಐಟಂ 1, 2, 5 ಮತ್ತು 6 ಮಾಯಮ್ಮರವರ ಪ್ರತ್ಯೇಕ ಆಸ್ತಿಯಾದ ಕಾರಣ ಸದರಿ ಸ್ವತ್ತಿನ ಖಾತೆ ಅವರ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತುಗಳು ನನ್ನ ತಂದೆಯ ಹೆಸರಿನಲ್ಲಿದ್ದು ಅವರ ಮೃತಪಟ್ಟ ನಂತರ ನಮಗೆ ತಿಳಿಯದೆ 1ನೇ ಪ್ರತಿವಾದಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ಖಾತೆಯ ವಿರುದ್ಧ ನಾನು ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ರೀತಿ ಮಾಡುತ್ತಾರೆ ಎಂದು ನನಗೆ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ಈ ಆಸ್ತಿಗೂ ನಮಗೂ ಸಂಬಂದವಿಲ್ಲ ಎಂದು ನನ್ನ ತಾಯಿ ನನಗೆ ತಿಳಿಸಿದ್ದರೂ ಸಹ ನಾನು ಅವರ ಇಚ್ಚೆಗೆ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

6. ದಾವಾ ಆಸ್ತಿಗಳ ಮೇಲೆ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ಪಾಲು ಬರಬೇಕಾದ ಆಸ್ತಿಗಳು ಸ.ನಂ.92, 94 ಮತ್ತು 96 ಹೊರತಾಗಿ ದಾವಾ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಸ.ನಂ.92, 94 ಮತ್ತು 96 ನನ್ನ ಪಿತ್ರಾರ್ಜಿತ ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ. ಸಾಕ್ಷಿ ಮುಂದುವರೆದು ಪತ್ರಗಳು ಸಿಕ್ಕಿದರೆ ಸೇರಿಸುತ್ತೇನೆ. ಪಿತ್ರಾರ್ಜಿತ ಆಸ್ತಿಗಳಿಗೆ ಸಂಬಂಧಿಸಿದಂತೆ ನಮ್ಮ ಗ್ರಾಮದಲ್ಲಿ ಜವರೇಗೌಡ ಮತ್ತು ಇತರರು ನ್ಯಾಯ ಪಂಚಾಯಿತಿ ಮಾಡಿದ್ದಾರೆ ಎಂದರೆ ಸರಿ. ಪಿತ್ರಾರ್ಜಿತ ಸ್ವತ್ತಿನಲ್ಲಿ ನಾನು ಯಾವುದೇ

ಭಾಗ ಕೇಳುವುದಿಲ್ಲ ಎಂದು ನನ್ನ ತಮ್ಮ 2 ನೇ ಪ್ರತಿವಾದಿ ಬಳಿ ನಾನು ಒಂದೂವರೆ ಲಕ್ಷ ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ.

7. 9 ಎಕರೆಯಲ್ಲಿ ನನ್ನ ತಂದೆಗೆ ದಾವಾ ಸ್ವತ್ತು ಹೊರತುಪಡಿಸಿ ನಾಲ್ಕುವರೆ ಎಕರೆ ಭಾಗ ಬಂದಿದೆ. ನನ್ನ ಚಿಕ್ಕಪ್ಪರವರಿಗೆ ಎಷ್ಟು ಭಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ. ಪಿತ್ರಾರ್ಜಿತ ಸ್ವತ್ತನ್ನು ದಾವೆಯಲ್ಲಿ ಸೇರಿಸದೆ ಮಾಯಮ್ಮರವರಿಗೆ ತವರುಮನೆ ಕಡೆಯಿಂದ ಬಂದಿರುವ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ಖರೀದಿಸಿದ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಐಟಂ 1,2 5 ಮತ್ತು 6 ರಲ್ಲಿ ಹೊಗೆಸೊಪ್ಪು ಬೆಳೆಯುತ್ತಾರೆ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗಿನಿಂದಲೂ ಹೊಗೆಸೊಪ್ಪು ಬೆಳೆಯುತ್ತಿದ್ದೇವೆ ಎಂದು ನುಡಿಯುತ್ತಾರೆ. ಹೊಗೆಸೊಪ್ಪಿನ ಲೈಸೆನ್ಸ ಹಾಗೂ ಬ್ಯಾಂಕಿನ ಬೆಳೆ ಸಾಲ 1ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ಸರಿ.

ಈ ಹಂತದಲ್ಲಿ ವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ